159 SL NO: 4 DT: 18-08-26

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ. ರಾಮೋಜಿ ಗೌಡ ಇವರ ಶೂನ್ಯವೇಳೆ ಪ್ರಸ್ತಾಪನೆಗೆ ಉತ್ತರಿಸುವ ಬಗ್ಗೆ:-**

**ವಿಷಯ:-**

ದಿನಾಂಕ: 14.08.2026 ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ, ಶಿಕ್ಷಣದಿಂದ ಯಾವುದೇ ಮಕ್ಕಳು ವಂಚಿತರಾಗಬಾರದು ಎಂಬ ದೃಷ್ಟಿಯಿಂದ ಸರ್ಕಾರ 'ನಿರಂತರ ಆಪ್' ಮೂಲಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಗೆ ಮುಂದಾಗಿದೆ. ಆದರೆ, ಜಿಲ್ಲೆಯಲ್ಲಿ ತಾಂತ್ರಿಕ ದೋಷ ಹಾಗೂ ಇನ್ನಿತರ ಸಮಸ್ಯೆಗಳು ಶಿಕ್ಷಕರನ್ನು ಬಿಟ್ಟೂಬಿಡದಂತೆ ಕಾಡುತ್ತಿದ್ದು, ಶಿಕ್ಷಕರು ನಿತ್ಯವೂ ಮಕ್ಕಳ ಹಾಜರಾತಿಗೆ ಕಸರತ್ತು ನಡೆಸುವಂತಾಗಿದೆ. ಸರ್ಕಾರ ಪ್ರಸಕ್ತ ವರ್ಷದಿಂದ ಸರ್ಕಾರಿ ನೌಕರರಿಗೆ "ಕರ್ತವ್ಯ" ಆಪ್ ಮೂಲಕ ಹಾಜರಾತಿ ಕಡ್ಡಾಯ ಮಾಡಿ ಆದೇಶಿಸಿದೆ. ಇದರ ಜೊತೆಗೆ ಶಾಲಾ ಶಿಕ್ಷಣ ಇಲಾಖೆ ಶಾಲೆಯಿಂದ ಹೊರಗುಳಿಯುತ್ತಿದ್ದ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಹಾಜರಾಗುವಂತೆ ನೋಡಿಕೊಳ್ಳುವ ಜತೆಗೆ ಶಿಕ್ಷಣ ಇಲಾಖೆಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಲು 'ನಿರಂತರ' ಆಪ್ ಬಳಕೆಗೆ ತಂದಿದೆ. ಈ ಮೂಲಕ ವಿದ್ಯಾರ್ಥಿಗಳ ಹಾಜರಾತಿಯನ್ನು ಡಿಜಿಟಲ್ ಮಾಡಿ ಆಪ್ ಮೂಲಕ ಕಡ್ಡಾಯವಾಗಿ ದಾಖಲಿಸಲು ಆದೇಶಿಸಿದೆ. ಆದರೆ, ನಿರಂತರ ಆಪ್‌ನಲ್ಲಿರುವ ತಾಂತ್ರಿಕ ಸಮಸ್ಯೆಗಳು ಸೇರಿದಂತೆ, ಇನ್ನಿತರೆ ತೊಂದರೆಗಳು ಶಿಕ್ಷಕರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಬೋಧನೆ ನಡುವೆ ನಿರಂತರ ಹಿಂಸೆ ಎಂಬುದು ಘೋಷವಾಕ್ಯವಾಗಿಬಿಟ್ಟಿದೆ. ಮಲೆನಾಡು ಸೇರಿದಂತೆ ಬಯಲು ಭಾಗದ ಶಾಲೆಗಳಲ್ಲಿಯೂ ನಿತ್ಯದ ಹಾಜರಾತಿ ಸಂದರ್ಭ ಒಂದಲ್ಲಾ ಒಂದು ತಾಂತ್ರಿಕ ಸಮಸ್ಯೆಗಳು ಶಿಕ್ಷಕರನ್ನು ಕಾಡುತ್ತಿವೆ. ಕೆಲ ಮಕ್ಕಳು ಶಾಲೆಗೆ ಹಾಜರಾಗಿದ್ದರೂ ಆಪ್‌ನಲ್ಲಿ ಅವರ ಮುಖ ದಾಖಲು ಆಗದಿರುವುದರಿಂದ ಗೈರು ಎಂದು ನಮೂದಾಗುತ್ತಿದೆ. ಇದರಿಂದ ಬಿಸಿಯೂಟದ ಆಹಾರ ಪೂರೈಕೆ, ತರಕಾರಿ ಖರ್ಚುವೆಚ್ಚ ಶಿಕ್ಷಕರ ಮೇಲೆ ಬರುತ್ತಿದೆ. ಇದರ ಜೊತೆಗೆ, ಸರ್ವರ್ ಸಮಸ್ಯೆ, ಟೆಕ್ನಿಕಲ್ ಎರರ್, ನೆಟ್ವರ್ಕ್ ಸಮಸ್ಯೆ, ಇಂಟರ್‌ನೆಟ್ ಸಮಸ್ಯೆಗಳಿಂದ ಶಿಕ್ಷಕರು ಮಕ್ಕಳ ಹಾಜರಾತಿಗೆ ಕಾಲಹರಣ ಮಾಡುವಂತಹ ಪರಿಸ್ಥಿತಿ ಎದರಾಗಿದೆ, ಈ ರೀತಿಯ ಹಲವು ತಾಂತ್ರಿಕ ಸಮಸ್ಯೆಗಳನ್ನು ತುರ್ತಾಗಿ ಸರಿಪಡಿಸಿ, ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಅನುಕೂಲ ಮಾಡಿಕೊಡುವಂತೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಬಳಿ ಪ್ರಸ್ತಾಪಿಸಬಯಸುತ್ತೇನೆ.

**ಉತ್ತರ:-**

ರಾಜ್ಯದಲ್ಲಿ ವಿದ್ಯಾರ್ಥಿಗಳ ನಿಯಮಿತ ಹಾಜರಾತಿಯನ್ನು ಖಚಿತಪಡಿಸುವುದು, ಶಾಲೆಯಿಂದ ಹೊರಗುಳಿಯುವ ಮಕ್ಕಳನ್ನು ಗುರುತಿಸಿ ಅವರನ್ನು ಪುನಃ ಶಿಕ್ಷಣದ ಮುಖ್ಯವಾಹಿನಿಗೆ ತರಲು ನೆರವಾಗುವುದು ಹಾಗೂ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿವಿಧ ಸರ್ಕಾರಿ ಯೋಜನೆಗಳ ಅನುಷ್ಠಾನಕ್ಕೆ ನಿಖರವಾದ ದತ್ತಾಂಶವನ್ನು ಒದಗಿಸುವ ಉದ್ದೇಶದಿಂದ "ನಿರಂತರ" ಕಾರ್ಯಕ್ರಮದಡಿ AI-Based Student Facial Attendance Monitoring System ಅನ್ನು 2026-27ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಹಾಗೂ ಅನುದಾನಿತ ಶಾಲಾ-ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ ವ್ಯವಸ್ಥೆಯು ವಿದ್ಯಾರ್ಥಿಗಳ ಹಾಜರಾತಿಯನ್ನು ಮುಖಚಹರೆ ಗುರುತಿಸುವ ತಂತ್ರಜ್ಞಾನದ ಮೂಲಕ ದಾಖಲಿಸಿ, ಹಾಜರಾತಿ ಮಾಹಿತಿಯನ್ನು SATS ತಂತ್ರಾಂಶದೊಂದಿಗೆ ಸಂಯೋಜಿಸುವ ರೀತಿಯಲ್ಲಿ ರೂಪಿಸಲಾಗಿದೆ. ಇದರಿಂದ ಹಾಜರಾತಿ ದಾಖಲಿಸುವ ಸಮಯವನ್ನು ಕಡಿಮೆ ಮಾಡಿ, ನಿಖರವಾದ ಹಾಜರಾತಿ ದತ್ತಾಂಶವನ್ನು ತ್ವರಿತವಾಗಿ ಲಭ್ಯವಾಗುವಂತೆ ಮಾಡುವ ಮೂಲಕ ಶಿಕ್ಷಕರು ತಮ್ಮ ಬೋಧನೆ ಮತ್ತು ಕಲಿಕಾ ಚಟುವಟಿಕೆಗಳಿಗೆ ಹೆಚ್ಚಿನ ಸಮಯವನ್ನು ವಿನಿಯೋಗಿಸಲು ಸಹಕಾರಿಯಾಗುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ.

ರಾಜ್ಯದ ಭೌಗೋಳಿಕ ವೈವಿಧ್ಯತೆ ಹಾಗೂ ಕೆಲವು ಪ್ರದೇಶಗಳಲ್ಲಿ ಇಂಟರ್‌ನೆಟ್ ಸಂಪರ್ಕದ ಲಭ್ಯತೆ, ಸರ್ವರ್ ಸಾಮರ್ಥ್ಯ, ಮೊಬೈಲ್ ಸಾಧನಗಳು ಮತ್ತು ಮುಖಚಹರೆ ಗುರುತಿಸುವಿಕೆ ಸೇರಿದಂತೆ ವಿವಿಧ ತಾಂತ್ರಿಕ ಅಂಶಗಳ ಕಾರಣದಿಂದ ಕಾರ್ಯಕ್ರಮದ ಆರಂಭಿಕ ಹಂತದಲ್ಲಿ ಕೆಲವು ತಾಂತ್ರಿಕ ತೊಂದರೆಗಳು ಎದುರಾಗಿದ್ದು, ಈ ಹಿನ್ನೆಲೆಯಲ್ಲಿ ಇಂಟರ್‌ನೆಟ್ ವೇಗ ಕಡಿಮೆಯಾಗಿರುವುದು ಅಥವಾ ಇಂಟರ್‌ನೆಟ್ ಸಂಪರ್ಕ ಇಲ್ಲದಿರುವ ಸಂದರ್ಭಗಳಲ್ಲಿಯೂ ಹಾಜರಾತಿ ದಾಖಲಿಸಲು ಅನುಕೂಲವಾಗುವಂತೆ Offline Mode ಸೇರಿದಂತೆ ತಾಂತ್ರಿಕ ಸುಧಾರಣೆಗಳನ್ನು ಮಾಡಲಾಗಿದೆ. ಅಲ್ಲದೆ, ಮುಖಚಹರೆ ಗುರುತಿಸುವಿಕೆಯಲ್ಲಿನ ದೋಷಗಳನ್ನು ಕಡಿಮೆ ಮಾಡಲು ಅಗತ್ಯ ತಾಂತ್ರಿಕ ಸುಧಾರಣೆಗಳು ಮತ್ತು ದೋಷ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಯಾವುದೇ ವಿದ್ಯಾರ್ಥಿಯು ಶಾಲೆಗೆ ಹಾಜರಾಗಿದ್ದರೂ ತಾಂತ್ರಿಕ ಕಾರಣದಿಂದ ಹಾಜರಾತಿ ದಾಖಲಾಗದಿರುವ ಸಂದರ್ಭಗಳನ್ನು ತಪ್ಪಿಸಲು, ವಿದ್ಯಾರ್ಥಿಗಳ ಮುಖಚಹರೆ ನೊಂದಣಿ, ದತ್ತಾಂಶ ಪರಿಶೀಲನೆ ಹಾಗೂ ಹಾಜರಾತಿ ದಾಖಲಾತಿ ಪ್ರಕ್ರಿಯೆಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಪ್ರತಿ ಜಿಲ್ಲಾವಾರು, ಕ್ಷೇತ್ರವಾರು ನೋಡಲ್ ಅಧಿಕಾರಿಗಳನ್ನು ನೇಮಿಸಿ ಈ ಸಂಬಂಧ ಎದುರಾಗಬಹುದಾದ ತಾಂತ್ರಿಕ ಸಮಸ್ಯೆಗಳನ್ನು ಸ್ಥಳೀಯ ಹಂತದಲ್ಲಿಯೇ ಪರಿಹರಿಸಲು ತಾಂತ್ರಿಕ ಬೆಂಬಲ (Technical Support) ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಇದಲ್ಲದೆ, ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಶಿಕ್ಷಕರು, ಮುಖ್ಯ ಶಿಕ್ಷಕರು, ಪ್ರಾಂಶುಪಾಲರು, ಕ್ಷೇತ್ರ ಸಂಪನ್ಮೂಲ ವ್ಯಕ್ತಿ (BRP), ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ CRP ಹಾಗೂ ಸಂಬಂಧಪಟ್ಟ ಕ್ಷೇತ್ರಮಟ್ಟದ ಅಧಿಕಾರಿಗಳಿಗೆ ಅಗತ್ಯ ತರಬೇತಿ ನೀಡಲಾಗಿದೆ.

"ನಿರಂತರ" ಕಾರ್ಯಕ್ರಮದ ಉದ್ದೇಶ ಶಿಕ್ಷಕರಿಗೆ ಹೆಚ್ಚುವರಿ ಹೊರೆ ನೀಡುವುದು ಅಲ್ಲ. ಬದಲಾಗಿ ಹಾಜರಾತಿ ದಾಖಲಾತಿಯನ್ನು ಸರಳೀಕರಿಸಿ, ವಿದ್ಯಾರ್ಥಿಗಳ ಹಾಜರಾತಿಯ ಕುರಿತು ನಿಖರ ಮತ್ತು ಪಾರದರ್ಶಕ ದತ್ತಾಂಶವನ್ನು ರೂಪಿಸುವುದಾಗಿದೆ. ಆದ್ದರಿಂದ, ಕಾರ್ಯಕ್ರಮದ ಅನುಷ್ಠಾನದ ಸಂದರ್ಭದಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸುವ ನಿಟ್ಟಿನಲ್ಲಿ ಇ-ಆಡಳಿತ ಕೇಂದ್ರದ (CeG) ಸಂಬಂಧಿತ ತಾಂತ್ರಿಕ ತಂಡ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗಿದೆ.

ನಿರಂತರ ಅಪ್ಲಿಕೇಶನ್‌ನಲ್ಲಿ ನಿಗದಿತ ಸಮಯದ ಹಾಜರಾತಿ ದಾಖಲಾತಿ (Attendance Capture Window) ಹಾಗೂ ಅನುದಾನಿತ ಶಾಲೆಗಳ ಸೇರ್ಪಡೆಯಿಂದ ಏಕಕಾಲದಲ್ಲಿ ಹೆಚ್ಚಿನ ಬಳಕೆದಾರರು ಲಾಗಿನ್ ಆಗುತ್ತಿದ್ದು, ಇದರಿಂದ Karnataka State Data Centre (KSDC) ನಲ್ಲಿ ಒದಗಿಸಿರುವ ಸರ್ವರ್ ಮೂಲಸೌಕರ್ಯದ ಸಾಮರ್ಥ್ಯ ಮೀರಿದ ಲೋಡ್ ಆರಂಭಿಕ ಹಂತದಲ್ಲಿ ಉಂಟಾಗಿದ್ದು, ಅಗತ್ಯ ಸರ್ವರ್ ಮೂಲಸೌಕರ್ಯವನ್ನು ಮೇಲ್ದರ್ಜೆಗೇರಿಸುವ (Infrastructure Upgrade) ಕಾರ್ಯ ಪೂರ್ಣಗೊಳ್ಳುವವರೆಗೆ, ಗರಿಷ್ಠ ಬಳಕೆಯ ಸಮಯದಲ್ಲಿ (Peak Hours) ಈ ದೋಷಗಳು ಕಂಡುಬಂದಲ್ಲಿ, ಸದರಿ ಸಮಸ್ಯೆಯನ್ನು ಬಗೆಹರಿಸಲು ಇಲಾಖೆಯು KSDC ರವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಈ ನಿರಂತರ App ಗೆ ಹೆಚ್ಚು ಸಾಮರ್ಥ್ಯವಿರುವ ಪ್ರತ್ಯೇಕ ಸರ್ವರ್ ಅನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.

ನಿರಂತರ ಅಪ್ಲಿಕೇಶನ್‌ನಲ್ಲಿನ ತಾಂತ್ರಿಕ ಸಮಸ್ಯೆಗಳ ಬಗ್ಗೆ, ಇಲಾಖೆಯು ಇ-ಆಡಳಿತ ಕೇಂದ್ರದ (CeG) ಸಂಬಂಧಿತ ತಾಂತ್ರಿಕ ತಂಡ ಹಾಗೂ KSDC ರವರೊಂದಿಗೆ ನಿರಂತರ ಅನುಪಾಲನೆ ಮಾಡಿ ಬಗೆಹರಿಸಲು ಕ್ರಮವಹಿಸಲಾಗುತ್ತಿದೆ.

ವಿದ್ಯಾರ್ಥಿಗಳ ಹಾಜರಾತಿ ದಾಖಲಿಸಲು "ನಿರಂತರ" ಕಾರ್ಯಕ್ರಮದಡಿ ಮೊಬೈಲ್ ಆಪ್ ಆಧಾರಿತ AI-Based Student Facial Attendance Monitoring System ಅನ್ನು ಬಳಸಲಾಗುತ್ತಿದ್ದು, ಈ ವ್ಯವಸ್ಥೆಯಲ್ಲಿ ಪ್ರತಿ ದಿನ ಎರಡು ಬಾರಿ ವಿದ್ಯಾರ್ಥಿಗಳ ಹಾಜರಾತಿಯನ್ನು ತರಗತಿಯ ಫೋಟೋ ತೆಗೆಯುವ ಮೂಲಕ ತಂತ್ರಾಂಶದಲ್ಲಿ ದಾಖಲಿಸಲಾಗುತ್ತಿದ್ದು, ಯಾವುದೇ ವಿದ್ಯಾರ್ಥಿಯು ಹಾಜರಾತಿ ಗುರುತಿಸುವಿಕೆಯಿಂದ ವಂಚಿತರಾಗುವುದಿಲ್ಲ. ಇದೇ ಹಾಜರಾತಿ ಮಾಹಿತಿಯನ್ನು ಮಧ್ಯಾಹ್ನ ಉಪಹಾರ ಯೋಜನೆಗೂ ಪರಿಗಣಿಸಲಾಗುತ್ತಿದೆ. ಆದ್ದರಿಂದ, ಮಧ್ಯಾಹ್ನ ಉಪಹಾರ ಯೋಜನೆಯ ಯಾವುದೇ ಖರ್ಚು-ವೆಚ್ಚ ಶಿಕ್ಷಕರ ಮೇಲೆ ಬರುವುದಿಲ್ಲ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನಗತ್ಯ ತೊಂದರೆ ಉಂಟಾಗದಂತೆ ಹಾಗೂ ಕಾರ್ಯಕ್ರಮದ ಅನುಷ್ಠಾನ ಸುಗಮವಾಗಿ ನಡೆಯುವಂತೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ವಿದ್ಯಾರ್ಥಿಗಳ ಶಿಕ್ಷಣದ ಹಕ್ಕು, ನಿಯಮಿತ ಹಾಜರಾತಿ ಮತ್ತು ಶೈಕ್ಷಣಿಕ ಪ್ರಗತಿಯನ್ನು ಖಚಿತಪಡಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದ್ದು, ಈ ಉದ್ದೇಶಕ್ಕೆ ತಂತ್ರಜ್ಞಾನವನ್ನು ಶಿಕ್ಷಕರಿಗೆ ಪರ್ಯಾಯವಾಗಿ ಅಲ್ಲದೆ, ಶಿಕ್ಷಕರ ಕಾರ್ಯಕ್ಕೆ ಪೂರಕವಾಗಿ ಬಳಸುವ ಮೂಲಕ "ನಿರಂತರ" ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಸಂಖ್ಯೆ : EP 63 EGOV 2026

ಎಸ್. ಮಧು ಬಂಗಾರಪ್ಪ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು